ಇಲಾಖೆಗಳಿಂದ ಬರಬೇಕಾದ ಬಾಕಿ ತೆರಿಗೆಗಳು

೫೪೩. ಶ್ರೀ ಜಿ. ರಾಜುಗೌಡ (ಹನೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಇದುವರೆಗೂ ವಾಣಿಜ್ಯ ತೆರಿಗೆ, ಅಬ್ಕಾರಿ ತೆರಿಗೆ ಮತ್ತು ಮೋಟಾರು ವಾಹನಗಳ ತೆರಿಗೆ ವಸೂಲಾಗಬೇಕಾದ ಮೊತ್ತವೆಷ್ಟು ?

ಆ) ಇದನ್ನು ವಸೂಲು ಮಾಡಲು ಸರ್ಕಾರದವರು ಕೈಗೊಂಡಿರುವ ತೀವ್ರ ಕಾರ್ಯಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ವಾಣಿಜ್ಯ, ಅಬ್ಕಾರಿ ಮತ್ತು ಮೋಟಾರು ವಾಹನಗಳ ತೆರಿಗೆಗಳ ಮೂಲಕ ೧೪,೭೬೮.೪೮ ಲಕ್ಷ ರೂ. ಗಳ ಬಾಕಿ ಸಂಗ್ರಹಿಸಬೇಕಾಗಿದೆ. ಇದರ ವಿಭಜನೆಯು ಕೆಳಕಂಡಂತಿದೆ.

	(ಲಕ್ಷ ರೂ. ಗಳಲ್ಲಿ)
ವಾಣಿಜ್ಯ ತೆರಿಗೆಗಳು (೩೦-೯-೮೭ರ ವರೆಗೆ)	ರೂ. ೧೩,೯೪೩.೦೦
ಅಬ್ಕಾರಿ ತೆರಿಗೆ (೩೦-೧೧-೮೭ರ ವರೆಗೆ)	ಬಾಕಿ ಇರುವುದಿಲ್ಲ.
ವಾಹನಗಳ ಮೇಲಣ ತೆರಿಗೆ (೩೦-೧೧-೮೭ರ ವರೆಗೆ)	ರೂ. ೮೨೫.೪೮
	ರೂ. ೧೪,೭೬೮.೪೮

ಆ) ಬಾಕಿ ಇರುವ ತೆರಿಗೆಗಳನ್ನು ಸಂಬಂಧಿತ ಕಾನೂನು ರೀತ್ಯ ವಸೂಲು ಮಾಡಲು ವಿಶೇಷ ಏರ್ಪಾಡುಗಳನ್ನು ಮಾಡಲಾಗಿದೆ. ನ್ಯಾಯಾಲಯದ ತಡೆ ಆಜ್ಞೆಯುಳ್ಳ ಪ್ರಸಂಗಗಳಲ್ಲಿ ತಡೆ ಆಜ್ಞೆಯನ್ನು ತೆರವು ಮಾಡಿಸುವಂತೆ ರಾಜ್ಯದ ಅಡ್ವೋಕೇಟ್ ಜನರಲ್ ಅವರನ್ನು ಕೋರಲಾಗಿದೆ. ಬಾಕಿ ತೆರಿಗೆ ವಸೂಲಿ ಮಾಡಲು ಇರುವ ಎಲ್ಲಾ ಸಾಧ್ಯತೆಗಳನ್ನು ಮುಗಿಸಿರುವ ಪ್ರಸಂಗಗಳಲ್ಲಿ ಭೂಕಿಯನ್ನು 'ಕಂದಾಯ ಬಾಂಕಿಯಂತೆ' ವಸೂಲಿ ಮಾಡಲು ಕಂದಾಯ ಇಲಾಖೆಯ ಅಧಿಕಾರಿಗಳನ್ನು ಕೋರಲಾಗಿದೆ.

ಐ. ಎ. ಎಸ್: ಅಧಿಕಾರಿಗಳ ವೆಚ್ಚ

೫೨೭. ಶ್ರೀ ಜಿ. ರಾಜುಗೌಡ (ಹನೂರು).—ಮಾನ್ಯಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಸರ್ಕಾರದಲ್ಲಿರುವ ಐ.ಎ.ಎಸ್. ಅಧಿಕಾರಿಗಳ ಸಂಖ್ಯೆ ಎಷ್ಟು ?

ಆ) ಇವರುಗಳ ವಾರ್ಷಿಕ ಒಟ್ಟು ವೇತನ ಎಷ್ಟಾಗುತ್ತದೆ.

ಇ) ಕಾರುಕೊಳ್ಳಲು ಮನೆಕಟ್ಟಿಕೊಳ್ಳಲು ಎಷ್ಟು ಜನಗಳಿಗೆ ಎಷ್ಟು ಮುಂಗಡಹಣ ಒದಗಿಸಲಾಗಿದೆ. ಇದರಲ್ಲಿ ಪರಿಶಿಷ್ಟಜಾತಿ ಹಾಗೂ ಪರಿಶಿಷ್ಟ ವರ್ಗದವರ ಸಂಖ್ಯೆ ಎಷ್ಟು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ೨೦೦

ಆ) ರೂ. ೧,೨೧,೭೨,೬೮೦-೦೦

ಇ) ೧೯೮೭-೮೮ನೇ ಸಾಲಿನಲ್ಲಿ ಕಾರುಕೊಳ್ಳಲು ೯ ಜನ ಐಎಎಸ್ ಅಧಿಕಾರಿಗಳಿಗೆ ಮುಂಗಡ ಹಣ ಒದಗಿಸಲಾಗಿದೆ. ಇದರಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಅಧಿಕಾರಿಗಳು ಒಬ್ಬರು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಧಿಕಾರಿಗಳು ಯಾರೂ ಇರುವುದಿಲ್ಲ.